1ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ. 949/2023**

**ಚಾ.ಸಾ. - 2**
**ಪ್ರಾ.ಸಾ. - 2**

**ಸಾಕ್ಷಿದಾರರ ಹೆಸರು** ಃ ಮೈಲಾರ ಚಂಪಣ್ಣ ತುರಾದಿ

**ಸಾಕ್ಷಿದಾರರ ವಯಸ್ಸು** ಃ 42 ವರ್ಷ

**ಸಾಕ್ಷಿದಾರರ ಉದ್ಯೋಗ** ಃ ವ್ಯಾಪಾರ

**ಸಾಕ್ಷಿದಾರರ ವಿಳಾಸ** ಃ ಉಡಿಕೇರಿ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 19-02-2026**

**ಮುಖ್ಯ ವಿಚಾರಣೆಃ ಎಪಿಪಿ ಅವರಿಂದಃ**

ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಅಬಕಾರಿ ದಾಳಿ ಮಾಡಿರುವುದಿಲ್ಲ ಹಾಗೂ ಏನನ್ನು ಜಪ್ತಿ ಮಾಡಿರುವುದಿಲ್ಲ. ನಾನು ಗೋವಿನಕೊಪ್ಪ ಗ್ರಾಮದಲ್ಲಿದ್ದಾಗ ಪೊಲೀಸರು ಒಂದು ದಾಖಲೆಯ ಮೇಲೆ ಒಂದು ಸಹಿಯನ್ನು ಪಡೆದುಕೊಂಡಿರುತ್ತಾರೆ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದಾಳಿ ಪಂಚನಾಮೆ ಆಗಿದ್ದು, ಅದನ್ನು ಈಗಗಲೇ ನಿಶಾನೆ ಪಿ **1** ಎಂದು ಗುರುತಿಸಲಾಗಿದೆ ಸಾಕ್ಷಿಯ ಸಹಿಯನ್ನು ನಿಶಾನೆ ಪಿ **1**ಬಿ ಎಂದು ಗುರುತಿಸಲಾಯಿತು.

(ಸಾಕ್ಷಿಯು ಅಭಿಯೋಜನ ಕೇಸಿಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಕೋರಿಕೊಂಡಿರುವರು . ಕಡತವನ್ನು ಪರಿಶೀಲಿಸಲಾಯಿತು. ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು ).

ಪಾಟೀ **ಸವಾಲುಃ ಎಪಿಪಿ ಅವರಿಂದ ಃ**

ದಿನಾಂಕ **23.03.2023** ರಂದು **15.00** ಗಂಟೆಯಿಂದ **16.00** ಗಂಟೆವರೆಗೆ ಗೋವಿನಕೊಪ್ಪ ಗ್ರಾಮದ ಗಾವಟಾನ್ ದಲ್ಲಿನ ನೀರಿನ ಟ್ಯಾಂಕ ಹತ್ತಿರ ಇರುವ ಸಾರ್ವಜನಿಕ ಸ್ಥಳದಲ್ಲಿ ನಿಮ್ಮ ಮತ್ತು ಚಾಸಾ **3** ರವರ ಸಮಕ್ಷಮ

ಅಬಕಾರಿ ದಾಳಿ ಮಾಡಿ ನಿಶಾನೆ ಪಿ **1** ರಂತೆ ಪಂಚನಾಮೆ ಮಾಡಿ **96** ಮದ್ಯದ ಟೇಟ್ರಾ ಪ್ಯಾಕೇಟಗಳನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗಾಗಿ **90** ಎಂ ಎಲ್ ನ **60** ಓರಿಜನಲ್ ಚಾಯ್ಸ ಡೀಲಕ್ಸ ವಿಸ್ಕಿ ಪೌಚಗಳನ್ನು ವಶಪಡಿಸಿಕೊಂಡು ಬಟ್ಟೆಯಿಂದ ಸುತ್ತಿರುತ್ತಾರೆ ಎಂದರೆ ಸರಿಯಲ್ಲ. ಅಂಗಶೋದನಾ ಕಾಲಕೆ **150** ರೂ.ಗಳನ್ನು ವಶಪಡಿಸಿಕೊಂಡಿರುತ್ತಾರೆ ಹಾಗೂ ಹಳದಿ ಪ್ಲಾಸ್ಟಿಕ್ ಗೊಬ್ಬರ ಚೀಲವನುನ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ **1** ರಂತೆ ನಿಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ **ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

**ಮರುವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾ.ಮತ್ತು ಜೆಎಂಎಫ್‌ಸಿ, ಬೈಲಹೊಂಗಲ